ತಿಳಿಸಿ. ಕೇಳದೆ ಇರಬಹುದು, ಏಕೆಂದರೆ ವ್ಯವಸ್ಥೆ ಸರಿಯಾಗಿಲ್ಲ. ಮುಂದೆ ನೋಡೋಣ.

Appointment of an I.A.S. Officer to Regional Transport Office for Speedy Disposal of applications.

Q.—299. Sri S. KARIAPPA (Virupakshipura).—

Will the Government be pleased to state :—

(*a*) whether the Regional Transport Office has been inspected recently ;

(*b*) if so, whether it has come to their notice that the copy applications, permit renewal applications and temporary permit applications have not been promptly disposed of ;

(*c*) whether it is under their contemplation to appoint an officer of the I.A.S. rank to this office ?

A.— Sri C. M. POONACHA (Minister for Home Affairs and Industries).—

(*a*) The question is not specific as to the office the member refers to.

(*b*) & (*c*) Do not arise.

ಶ್ರೀ ಎಸ್. ಕರಿಯಪ್ಪ.—ಈ ಟ್ರಾನ್ಸ್ ಪೋರ್ಟ್ ಆಫೀಸನ್ನು ಪರಿಶೀಲಿಸಲು ಒಬ್ಬ ಇನ್ಸ್‌ಪೆಕ್ಟರನ್ನು ನೇಮಿಸಿರಲಿಲ್ಲವೇ ?

*ಶ್ರೀ ಸಿ. ಎಂ. ಪೂಣಚ್ಚ.—ಪ್ರಶ್ನೆ ಗೊತ್ತಾಗಲಿಲ್ಲ.

ಅಧ್ಯಕ್ಷರು.— ತಾವು ಪ್ರಶ್ನೆ ಕೇಳುವಾಗ ಒಂದು ನಿರ್ದಿಷ್ಟವಾದ ಆಫೀಸಿನ ವಿಷಯವಾಗಿ ಪ್ರಶ್ನೆ ಕೇಳಿದರೆ ಒಳ್ಳೆಯದು.

ಶ್ರೀ ಎಸ್. ಕರಿಯಪ್ಪ.—ಈಗ ನೇಮಿಸಿರುವ ರೀಜನಲ್ ಟ್ರಾನ್ಸ್ ಪೋರ್ಟ್ ಆಫೀಸರು ಸರಿಯಾದ ಅರ್ಹತೆಗಳನ್ನು ಹೊಂದಿಲ್ಲವೆಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಈ ರೀಜನಲ್ ಟ್ರಾನ್ಸ್ ಪೋರ್ಟ್ ಆಫೀಸಿಗೆ ಸರಿಯಾದ ಮಾಹಿತಿ ಇರುವ ಆಫೀಸರುಗಳನ್ನೇ ನೇಮಕ ಮಾಡಲಾಗಿದೆ.

ಶ್ರೀ ಎಸ್. ಕರಿಯಪ್ಪ.—ಇವರ ರ್ಯಾಂಕು ಏನು ?

ಶ್ರೀ ಸಿ. ಎಂ. ಪೂಣಚ್ಚ.—ಅವರು ಬೇರೆ ಒಂದು ಇಲಾಖೆಯಲ್ಲಿರುವ ಅಸಿಸ್ಟೆಂಟು ಕಮಿಷನರ್ ರ್ಯಾಂಕಿಗೆ ಸೇರಿದ ಆಫೀಸರು.

ಶ್ರೀ ಎಸ್. ಕರಿಯಪ್ಪ.—ಮೊದಲು ಐ. ಎ. ಎಸ್. ರ್ಯಾಂಕಿಗೆ ಸೇರಿದ ಆಫೀಸರಿರಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ನನಗೆ ಆ ವಿಷಯ ತಿಳಿಯದು.

Exempting Local Bodies from Audit Charges

Q.—372 Sri B. S. SHANKARAPPA (Hosadurga).—

Will the Government be pleased to state :—

(*a*) whether they propose to exempt Local Bodies from the payment of audit charges as they do not make any profits ;

(*b*) whether this system obtained in the integrated areas of the new Mysore State ;

(*c*) whether they propose to take appropriate action in regard to application of this system throughout the State ?

A.—Sri T. MARIAPPA (Minister for Finance and Legal Affairs).

(*a*) This is a matter of opinion.

(*b*) The system is different.

(*c*) The question of levy of audit fees throughout the State will be considered.

ಶ್ರೀ ಬಿ. ಎಸ್. ಶಂಕರಪ್ಪ.—ಹಳೆಯ ಮೈಸೂರು ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಆಡಿಟ್ ಚಾರ್ಜುಗಳನ್ನು ವಸೂಲು ಮಾಡುತ್ತಿಲ್ಲವೆಂಬುದು ಸರ್ಕಾರಕ್ಕೆ ತಿಳಿದಿದೆಯೇ ?

ಶ್ರೀ ಟಿ. ಮರಿಯಪ್ಪ.—ತಿಳಿದಿದೆ.

Relief to Local Bodies for Payment of Enhanced Salary to their Employees.

Q.—373. Sri B. S. SHANKARAPPA (Hosadurga).—

Will the Government be pleased to state :—

whether they propose to grant some amount by way of relief to local bodies towards enhanced pay and dearness allowance of their employees ?

A.—Sri T. MARIAPPA (Minister for Finance and Legal Affairs).—

This depends on the resources of the State.

ಶ್ರೀ ಬಿ. ಎಸ್. ಶಂಕರಪ್ಪ.—ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸಮಾಡತಕ್ಕ ನೌಕರಮಾನೆಯರು ಸರ್ಕಾರದ ನೌಕರರಲ್ಲವೇ ?

ಶ್ರೀ ಟಿ. ಮರಿಯಪ್ಪ.—ಕೆಲವು ಸರ್ಕಾರದ ನೌಕರರನ್ನೂ ನಾವು lend ಮಾಡಿದ್ದೇವೆ; ಅವರೂ ಕೆಲವರನ್ನು ನೇಮಿಸಿಕೊಂಡಿದ್ದಾರೆ.

ಶ್ರೀ ಬಿ. ಎಸ್. ಶಂಕರಪ್ಪ.—ಕೇಂದ್ರ ಸರ್ಕಾರದ ವರು ಸರ್ಕಾರಿ ನೌಕರಮಾನೆಯರ ಸಂಬಳಗಳನ್ನು ಜಾಸ್ತಿಮಾಡುವ ಬಗ್ಗೆ ಸಹಾಯ ದ್ರವ್ಯವೇನಾದರೂ ಕೊಟ್ಟಿದ್ದಾರೆಯೇ? ಅದರಿಂದ ಇವರುಗಳಿಗೂ ಕೊಡಬೇಕಲ್ಲವೇ?

ಶ್ರೀ ಟಿ. ಮರಿಯಪ್ಪ.—ಅವರೂ ತಮ್ಮ Resoures ಏನಿದೆ ಎಂಬುದನ್ನು ನೋಡಿಕೊಳ್ಳಬೇಕು. ಇದನ್ನೆಲ್ಲಾ ವಿಚಾರಮಾಡಿ ವರದಿಮಾಡಲೆಂದೇ ನಾವೊಂದು ಸಮಿತಿಯನ್ನು ಕೂಡ ನೇಮಿಸಿದ್ದೇವೆ.

ಶ್ರೀ ಬಿ. ಎಸ್. ಶಂಕರಪ್ಪ.—ಕೇಂದ್ರ ಸರ್ಕಾರದ ವರು ನಮ್ಮ ಸರ್ಕಾರದ ನೌಕರಮಾನೆಯರ ಪರಿಹಾರದ ಬಗ್ಗೆ ಸ್ವಲ್ಪ ಹಣವನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆಯೇ?

ಶ್ರೀ ಟಿ. ಮರಿಯಪ್ಪ.—ಕೊಡುತ್ತಾರೆಂದು ಹೇಳಿದ್ದಾರೆ; ಕೊಡುತ್ತಾರೆಂಬ ನಿರೀಕ್ಷಣೆಯೂ ಇದೆ.

Duration of Service of the Senior Operator of Electrical Department, Saklespur.

Q.—8. Sri B. N. BORANNA GOWDA (Belur).—

Will the Government be pleased to state :—

since how long the Senior Operator of Electrical Department is serving in Saklespur ?

A.—Sri H. K. VEERANNA GOWDH (Minister for Public Works).—The present senior operator is working at Saklespur from 12th November 1956.

Condition of the Road between Belur and Mudigere *via* Gendehalli.

Q.—19. Sri B. N. BORANNA GOWDA (Belur).—

Will the Government be pleased to state :—

(*a*) whether it is a fact that the road between Belur and Mudigere *via* Gendehalli is in a bad condition and unfit for use by any vehicle or traffic ;

(*b*) whether it is a fact that they have issued permits to run buses on these routes ;

(*c*) whether it is a fact that a number of lorries are plying on this route ;

(*d*) whether it is a fact that due to the meagre mileage the Department is not taking action to repair this road ;

(*e*) whether they would enhance the mileage grant to this road ?

A.—Sri H. K. VEERANNA GOWDH (Minister for Public Works).—

(*a*) No.
(*b*) Yes.
(*c*) Yes.
(*d*) The maintenance of the road is consistent with the grants available.
(*e*) Proposals are under examination.

ಶ್ರೀ ಬಿ. ಎಚ್. ಬೋರಣ್ಣಗೌಡ.—ಬೇಲೂರಿನಿಂದ ಮೂಡಿಗೆರೆಗೆ ಹೋಗುವ ರಸ್ತೆಯ ಉದ್ದವೆಷ್ಟು ?

*ಶ್ರೀ ಎಚ್. ಕೆ. ವೀರಣ್ಣಗೌಡ.—20 ಮೈಲಿಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ 20 ಮೈಲಿಲ ಗಳಲ್ಲಿ ಹಾಸನ ಡಿಸ್ಟ್ರಿಕ್ಟಿಗೆ ಎಷ್ಟುಮೈಲಿ ಸೇರಿದೆ, ಚಿಕ್ಕಮಗಳೂರಿಗೆ ಎಷ್ಟು ಮೈಲಿ ಸೇರಿದೆ ?

ಶ್ರೀ ಎಚ್. ಕೆ.ವೀರಣ್ಣಗೌಡ.—ಹಾಸನ ಡಿಸ್ಟ್ರಿಕ್ಟಿಗೆ ಸೇರಿದ್ದು 12 ಮೈಲಿ. ಚಿಕ್ಕಮಗಳೂರು ಡಿಸ್ಟ್ರಿಕ್ಟಿಗೆ ಸೇರಿದ್ದು ಎಂಟು ಮೈಲಿಗಳು.

ಶ್ರೀ ಬಿ. ಎಚ್. ಬೋರಣ್ಣಗೌಡ.—ಚಿಕ್ಕಮಗಳೂರು ಡಿಸ್ಟ್ರಿಕ್ಟಿನ ಎಂಟು ಮೈಲಿಗೆಷ್ಟು ಮೈಲೇಜು ಕೊಡುತ್ತಿದ್ದೀರಿ ? ಈ 12 ಮೈಲಿಗಳಿಗೆಷ್ಟು ಮೈಲೇಜು ಕೊಡುತ್ತಿದ್ದೀರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ಎಲ್ಲಕ್ಕೂ 300 ರೂಪಾಯಿಗಳನ್ನು ಒಂದೊಂದು ಮೈಲಿಗೆ ಕೊಡುತ್ತಿದ್ದೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಮೂಡಿಗೆರೆ ಕಡೆಗೆ ಮೈಲಿಗೆ 370 ರೂಪಾಯಿಗಳಂತೆಯೂ ಹಾಸನ ಕಡೆಗೆ ಮೈಲಿಗೆ 280 ರೂಪಾಯಿಗಳಂತೆಯೂ ಕೊಡುತ್ತಿದ್ದಾರೆಂಬುದು ತಮ್ಮ ಅವಗಾಹನೆಗೆ ಬಂದಿದೆಯೇ ?

ಶ್ರೀ ಎಚ್. ಕೆ.ವೀರಣ್ಣಗೌಡ.—ನಮಗೆ ಗೊತ್ತಾಗಿರುವಂತೆ 300 ರೂಪಾಯಿಗಳನ್ನು ಕೊಡಲಾಗುತ್ತಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಚಿಕ್ಕಮಗಳೂರು ಡಿಸ್ಟ್ರಿಕ್ಟಿಗೆ ಯಾವ ದರದಂತೆ ಕೊಡುತ್ತಿದ್ದೀರೋ ಅಷ್ಟನ್ನೇ ಹಾಸನ ಡಿಸ್ಟ್ರಿಕ್ಟಿಗೂ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಚಿಕ್ಕಮಗಳೂರು ಡಿಸ್ಟ್ರಿಕ್ಟಿನವರೂ ಆ ಪ್ರಾಂತ್ಯಕ್ಕೆ ಕೊಡುತ್ತಿರುವ ದರ ಸಾಕಾಗುವುದಿಲ್ಲ, ಸರಾಸರಿ 600 ರೂಪಾಯಿಗಳನ್ನು ಮೈಲಿಗೆ ಕೊಡಬೇಕೆಂದು ಒಂದು ಅಂದಾಜನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ.

Improvements to Bhatkal-Sagar Road.

Q.—110. Sri J. H. SHAMSUDDIN (Honawar).—

Will the Government be pleased to state :—

(*a*) whether it has come to their notice that a portion of the road in between Bhatkal and Sagar, Shimoga District, is very unsatisfactory and is